# ತ್ರಿವರ್ಣ ಕಥನ

'ಅಂದ್ರೆ, ಈಗ ನಾವು ಹಾರಿಸೋ ನ್ಯಾಷನಲ್ ಫ್ಲ್ಯಾಗ್ ಇದೇ ರೀತಿ ಇದೆಯಲ್ಲಪ್ಪ. 1931ರಲ್ಲಿಯೇ ಫೈನಲ್ ಆಗಿತ್ತಾ ನಮ್ಮ ಧ್ವಜ ಹಾಗಿದ್ದರೆ...'

'ಹೌದು... ರಾಷ್ಟ್ರಧ್ವಜಕ್ಕೆ ಸಂಬಂಧಿಸಿದಂತೆಯೇ, 1947ರ ಜುಲೈ 22ರಂದು, ಸಂವಿಧಾನ ಸಭೆ ನಡೆಯಿತು. ಸಭೆಯ ರಾಷ್ಟ್ರಧ್ವಜ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಬಾಬುರಾಜೇಂದ್ರ ಪ್ರಸಾದ್ ಅವರ ನೇತೃತ್ವದಲ್ಲಿ ಈ ಸಭೆ ನಡೆಯಿತು. ಹೆಚ್ಚೂ ಕಡಿಮೆ 1931ರ ಧ್ವಜದಂತೆಯೇ ಇದ್ದರೂ, ಅದು ಪ್ರತಿನಿಧಿಸುವ ಬಣ್ಣಗಳ ವ್ಯಾಖ್ಯಾನವನ್ನು ಸ್ವಲ್ಪ ಬದಲಿಸಲಾಯಿತು. ಧ್ವಜದ ಮೇಲಿನ ಪಟ್ಟಿಯಲ್ಲಿರುವ ಕೇಸರಿ ಬಣ್ಣ ಧೈರ್ಯ, ಬಲ ಮತ್ತು ತ್ಯಾಗ ಪ್ರತಿಬಿಂಬಿಸಿದರೆ, ಬಿಳಿ ಅಥವಾ ಶ್ವೇತ ಬಣ್ಣವು ಸತ್ಯ, ಪ್ರಾಮಾಣಿಕತೆ, ಶುದ್ಧತೆ ಮತ್ತು ಶಾಂತಿಯನ್ನು, ಕೆಳಗಿನ ಪಟ್ಟಿಯಲ್ಲಿರುವ ಹಸಿರು ಬಣ್ಣವು ಹಸಿರು ಭೂಮಿಯ ನಂಬಿಕೆ, ಅಶ್ವದಳ, ಬೆಳವಣಿಗೆ ಮತ್ತು ಫಲವತ್ತತೆಯ ಜೊತೆ ಸಮೃದ್ಧ ಜೀವನವನ್ನು ಪ್ರತಿನಿಧಿಸುತ್ತದೆ ಎಂದು ವ್ಯಾಖ್ಯಾನಿಸಲಾಯಿತು. ಅಶೋಕ ಸಾಮ್ರಾಟನ ಅಶೋಕ ಚಕ್ರವನ್ನು ಧರ್ಮಚಕ್ರ ಎಂದೂ ಕರೆಯಲಾಯಿತು. ಇದರಲ್ಲಿನ 24 ಗೆರೆಗಳು ಜೀವನದ ಚಲನಶೀಲತೆಯನ್ನು ಸಂಕೇತಿಸುತ್ತದೆ, ಅದರ ಅನುಪಸ್ಥಿತಿಯೇ ಸಾವು ಎಂದೂ ಹೇಳಲಾಯಿತು. ಇದಷ್ಟೇ ಅಲ್ಲದೆ, ನಾವು ನಮ್ಮ ಕರ್ತವ್ಯಕ್ಕೆ ದಿನದ 24 ಗಂಟೆಯೂ ಬದ್ಧರಾಗಿರಬೇಕು ಮತ್ತು ನಿಷ್ಠೆ ಹೊಂದಿರಬೇಕು ಎಂದೂ ಹೇಳುತ್ತದೆ ಎಂಬುದಾಗಿ ವ್ಯಾಖ್ಯಾನಿಸಲಾಗುತ್ತದೆ...'

'ಅಂದರೆ, ಸ್ವಾತಂತ್ರ್ಯ ನಂತರವೂ ಇದೇ ಧ್ವಜ ಮುಂದುವರೀತೇನಪ್ಪ...'

'ಹೌದು... 1947ರ ಆಗಸ್ಟ್ 15ರಿಂದ 1950ರ ಜನವರಿ 26ರವರೆಗೆ ಈ ಧ್ವಜವನ್ನು ಭಾರತದ ಶಕ್ತಿ ಎಂದೇ ಬಿಂಬಿಸಲಾಯಿತು. 1950ರಲ್ಲಿ ಸಂವಿಧಾನ ಜಾರಿಗೆ ಬಂದಾಗ, ಇದೇ ಧ್ವಜವನ್ನು ಸ್ವತಂತ್ರ ಗಣರಾಜ್ಯದ ರಾಷ್ಟ್ರೀಯ ಧ್ವಜವೆಂದು ಘೋಷಿಸಲಾಯಿತು. ಪಿಂಗಾಳಿ ವೆಂಕಯ್ಯ ಅವರು ರೂಪಿಸಿದ್ದ ಧ್ವಜವೇ ಅಂತಿಮವಾಗಿದ್ದರಿಂದ, ಅವರನ್ನು ಈಗಲೂ ದೇಶ ನೆನಪಿಸಿಕೊಳ್ಳುತ್ತಿದೆ ಪುಟ್ಟ. ಅವರ ಸ್ಮರಣಾರ್ಥ 2009ರಲ್ಲಿ ಕೇಂದ್ರ ಸರ್ಕಾರವು ಅಂಚೆಚೀಟಿಯೊಂದನ್ನು ಬಿಡುಗಡೆ ಮಾಡಿತು. ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಕೊಡಬೇಕು ಎಂಬ ಶಿಫಾರಸು ಕೂಡ ಮಾಡಲಾಗಿದೆ. ಕೇಂದ್ರ ಸರ್ಕಾರ ಇನ್ನೂ ನಿರ್ಧಾರ ತೆಗೆದುಕೊಳ್ಳಬೇಕಿದೆ...'

'ಓಹ್... ನಮ್ಮ ರಾಷ್ಟ್ರಧ್ವಜದ ಹಿಂದೆ ಇಷ್ಟೆಲ್ಲ ಕಥೆ ಇದೆಯಾ? ಈಗ, ಇಂಡಿಯಾದಲ್ಲಿರೋ ಯಾರು ಬೇಕಾದರೂ ನ್ಯಾಷನಲ್ ಫ್ಲ್ಯಾಗ್ ಮಾಡಬಹುದೇನಪ್ಪ...'

'ಯಾರು ಬೇಕಾದರೂ ಮಾಡೋ ಹಾಗಿಲ್ಲ ಪುಟ್ಟ. ಅದಕ್ಕೆಂದೇ ಕೆಲವು ನಿಯಮಗಳಿವೆ. ನಮ್ಮ ರಾಷ್ಟ್ರಧ್ವಜವು ಆಯತಾಕಾರದಲ್ಲಿದ್ದು, 3:2ರ ಅನುಪಾತ ಹೊಂದಿರಬೇಕು. ಕೈಯಿಂದ ನೇಯ್ದಿರುವ ಉಣ್ಣೆ, ಹತ್ತಿ ಅಥವಾ ರೇಷ್ಮೆ ಅಂಶವಿರುವ ಖಾದಿ ಬಟ್ಟೆಯದ್ದಾಗಿರಬೇಕು



ವಾಘಾ ಗಡಿಯಲ್ಲಿ ಹಾರುತ್ತಿರುವ ಭಾರತದ ಹೆಮ್ಮೆಯ ಧ್ವಜ

ಮತ್ತು ಬಿಐಎಸ್ ಗುರುತು ಅಥವಾ ಮಾನ್ಯತೆ ಹೊಂದಿರಬೇಕು. ಪ್ರತಿ ಸೆಂಟಿಮೀಟರ್‌ಗೆ ನಾಲ್ಕು ಹೊಲಿಗೆಗಳಿರಬೇಕು ಎಂಬ ನಿಯಮಗಳೂ ಇವೆ. ಇವುಗಳ ಅನುಸಾರವೇ ನಮ್ಮ ಬೆಂಗೇರಿಯಲ್ಲಿ ಧ್ವಜ ರೆಡಿಯಾಗ್ತಾವೆ ಪುಟ್ಟ.'

'ಓಹ್ ಹೌದಾ! ಮತ್ತೆ ನಾವು ಸ್ಕೂಲ್‌ನಲ್ಲಿ ಧ್ವಜ ಮುಟ್ಟೋಕೆ ಹೋದಾಗೆಲ್ಲ, ಅದಕ್ಕೆಲ್ಲ ತುಂಬಾ ರೂಲ್ಸ್ ಇವೆ, ಹುಷಾರು ಅಂತಾ ಟೀಚರ್ ಹೇಳ್ತಿರ್ತಾರೆ. ಧ್ವಜ ಮುಟ್ಟೋಕೂ ರೂಲ್ಸ್ ಇವೆಯಾ ಅಪ್ಪ...'

'ಮುಟ್ಟೋದಕ್ಕಲ್ಲಮ್ಮ, ರಾಷ್ಟ್ರಧ್ವಜವನ್ನು ಹಾರಿಸೋದಕ್ಕೂ ಕೆಲವು ರೂಲ್ಸ್‌ಗಳಿವೆ. ರಾಷ್ಟ್ರಧ್ವಜವನ್ನು ಎತ್ತಿದಾಗ, ಕೇಸರಿ ಬಣ್ಣವು ಮೇಲ್ಭಾಗದಲ್ಲಿರುವಂತೆಯೇ ಹಿಡಿದಿರಬೇಕು, ರಾಷ್ಟ್ರಧ್ವಜದಲ್ಲಿ ಯಾವುದೇ ಧ್ವಜ ಅಥವಾ ಲಾಂಛನ ಇರಬಾರದು. ನ್ಯಾಷನಲ್ ಫ್ಲ್ಯಾಗ್ ಜೊತೆಗೆ ಮತ್ತೊಂದು ಧ್ವಜವನ್ನು ಹಾರಿಸಲಾಗುತ್ತಿದ್ದರೆ, ಅವುಗಳನ್ನು ಯಾವಾಗಲೂ ಅದರ ಎಡಗಡೆ ಇರುವ ಸಾಲಿನಲ್ಲಿ ಹಾರಿಸಬೇಕು. ಮೆರವಣಿಗೆ ಹೊರಟಿದ್ದರೆ, ರಾಷ್ಟ್ರಧ್ವಜವು ಬಲಭಾಗದಲ್ಲಿರಬೇಕು ಅಥವಾ ಅದು ಇತರ ಧ್ವಜಗಳ ಸಾಲಿನ ಮಧ್ಯದಲ್ಲಿರಬೇಕು. ರಾಷ್ಟ್ರಧ್ವಜವನ್ನು ಯಾವಾಗಲೂ ಮುಖ್ಯ ಸರ್ಕಾರಿ ಕಟ್ಟಡಗಳು ಮತ್ತು ರಾಷ್ಟ್ರಪತಿ ಭವನ, ಸಂಸತ್ ಭವನ, ಸುಪ್ರೀಂ ಕೋರ್ಟ್, ಹೈಕೋರ್ಟ್ ಮುಂತಾದ ಸಂಸ್ಥೆಗಳಲ್ಲಿ ಪ್ರತಿದಿನ ಹಾರಿಸಬೇಕು. ಇದು ಹೊರತುಪಡಿಸಿ, ರಾಷ್ಟ್ರಧ್ವಜವನ್ನು ಯಾವುದೇ ವೈಯಕ್ತಿಕ ವ್ಯವಹಾರ ಅಥವಾ ಕೆಲಸಕ್ಕೆ ಬಳಸುವಂತಿಲ್ಲ. ಅಲ್ಲದೆ, ಸಂಜೆ ಸೂರ್ಯ ಮುಳುಗುವುದರೊಳಗೆ ರಾಷ್ಟ್ರಧ್ವಜವನ್ನು ಕೆಳಗಿಳಿಸಬೇಕು...'

'ಈ ರೂಲ್ಸ್ ಎಲ್ಲ ಫಾಲೋ ಮಾಡದಿದ್ರೆ ಪನಿಶ್‌ಮೆಂಟ್ ಕೊಡ್ತಾರೇನಪ್ಪ...'

'ನಮ್ಮ ಸಂವಿಧಾನದ IV–ಎ ಭಾಗದ 51–3 ವಿಧಿಯ ಅನ್ವಯ, 11 ಮೂಲಭೂತ ಕರ್ತವ್ಯಗಳು ಇವೆ. ಅವುಗಳಲ್ಲಿ ಪ್ರಮುಖವಾದವು, ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜವನ್ನು ಗೌರವಿಸಬೇಕು ಅನ್ನೋದು. ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದರೆ, ಸಂವಿಧಾನಕ್ಕೆ ಅಗೌರವ ತೋರಿದರೆ, ರಾಷ್ಟ್ರಗೀತೆಯನ್ನು ಹಾಡಲು ನಿರಾಕರಿಸಿದರೆ, ರಾಷ್ಟ್ರದ ಗೌರವಕ್ಕೆ ಅವಮಾನ ತಡೆ ಕಾಯ್ದೆ 1971 (Prevention of insults to national Honour Act of 1971) ಅನ್ವಯ, ಜೈಲು ಶಿಕ್ಷೆ ವಿಧಿಸಬಹುದು ಮತ್ತು ಅಂಥವರನ್ನು ರಾಜ್ಯದ ಶಾಸಕ ಅಥವಾ ದೇಶದ ಸಂಸದ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸುವ ಅವಕಾಶವಿದೆ.'

'ಹಾಗಾದರೆ, ನಾವು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವದ ದಿನ ಮಾತ್ರ ಫ್ಲ್ಯಾಗ್ ಹಾರಿಸಬೇಕೇನಪ್ಪ..'

'ಮೊದಲು ಹಾಗೇ ಇತ್ತು ಮಗಳೇ. 2001ರಲ್ಲಿ ಕೈಗಾರಿಕೋದ್ಯಮಿ ನವೀನ್ ಜಿಂದಾಲ್ ಎಂಬುವರು, ದೇಶದ ಪ್ರತಿ ನಾಗರಿಕನಿಗೂ ಧ್ವಜಾರೋಹಣಕ್ಕೆ ಮುಕ್ತ ಅವಕಾಶ ನೀಡಬೇಕು ಎಂದು ಕೋರಿ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ರು. ಕೇಂದ್ರ ಸರ್ಕಾರವೂ ಈ ಮನವಿಯನ್ನು ಪುರಸ್ಕರಿಸಿ, ಧ್ವಜ ಸಂಹಿತೆಯಲ್ಲಿ ಕೆಲವು ಬದಲಾವಣೆ ಮಾಡಿತು. ಸಂವಿಧಾನದಲ್ಲಿನ ನಿಯಮಗಳನ್ನು ಪಾಲಿಸಿ, ಧ್ವಜಾರೋಹಣ ಮಾಡುವುದಕ್ಕೆ ಈಗ ಯಾರಿಗೆ ಬೇಕಾದರೂ ಮುಕ್ತ ಅವಕಾಶವಿದೆ.'

'ಆದರೆ ಅಪ್ಪ, ಖಾದಿ ಬಟ್ಟೆಯಿಂದಾನೇ ಧ್ವಜ ಮಾಡಿರಬೇಕು, ಮೆಷಿನ್ ಎಲ್ಲ ಬಳಸಬಾರದು ಅಂತಾ ನೀನು ಹೇಳ್ದೆಯ. ಮತ್ತೆ, ಪಾಲಿಯೆಸ್ಟರ್ ಧ್ವಜಗಳೆಲ್ಲ ಮಾರ್ಕೆಟ್‌ನಲ್ಲಿವೆಯಲ್ಲಪ್ಪ...'

'ಕೇಂದ್ರ ಸರ್ಕಾರ 2002ರ ಧ್ವಜ ಸಂಹಿತೆಗೆ ತಿದ್ದುಪಡಿ ತಂದಿದೆ ಮಗಳೇ. ಈಗ, ಖಾದಿ ಜೊತೆಗೆ ಪಾಲಿಯೆಸ್ಟರ್ ಧ್ವಜಗಳನ್ನೂ ಬಳಸಬಹುದು. ಯಂತ್ರದ ಸಹಾಯದಿಂದ ಮಾಡಿದ ಧ್ವಜಗಳನ್ನೂ ಬಳಸಬಹುದು.'

'ಓಹ್ ಹೌದೇನಪ್ಪ. ಥ್ಯಾಂಕ್ ಯೂ ಅಪ್ಪ...'

'ಇಷ್ಟೊತ್ತು ಕುತೂಹಲದಿಂದ, ತಾಳ್ಮೆಯಿಂದ ಕೇಳಿದ ನಿನಗೂ ಥ್ಯಾಂಕ್ಸ್ ಪುಟ್ಟ.'

ಪ್ರತಿಕ್ರಿಯಿಸಿ: feedback@sudha.com